ದಿಃ **13-12-2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಃ ಶ್ರೀ ಎಸ್.ಕೆಪಿ. ವಕೀಲರಿಂದಃ**

ವಾದಿಯ ಮನೆಯ ಪಕ್ಕದಲ್ಲಿ ಅವರ ಚಿಕ್ಕಪ್ಪನ ಮನೆ ಇದೆ ಎಂದರೆ ನಿಜ. ವಾದಿಯ ಮನೆಯ ಮತ್ತು ಅವರ ಚಿಕ್ಕಪ್ಪನ ಮನೆಯ ನಂಬರ್ ನನಗೆ ನೆನಪಿಲ್ಲ. ವಾದಿಯ ಮನೆಗೆ ತಾಗಿ ಅವರ ಚಿಕ್ಕಪ್ಪನ ಮನೆ ಇದೆ. ಕಂಪೌಂಡ್ ಗೇಟ್ ವಾದಿ ಮತ್ತು ಅವರ ಚಿಕ್ಕಪ್ಪ ಇವರ ಮನೆಗಳಿಗೆ ಹೋಗಲು ಬಿಟ್ಟ ಜಾಗೆಯೇಂದರೆ ಸರಿಯಲ್ಲ. ಅದು ಸಾರ್ವಜನಿಕರಿಗೆ ಹೋಗಲು ಇರುವ ರಸ್ತೆ ಎಂದು ನುಡಿಯುತ್ತಾರೆ. ಸದರಿ ಗೇಟ್ ಗಾಗಿ ಬಿಟ್ಟ ಜಾಗೆ ಸುಮಾರು 25–30 ಅಡಿ ಅಗಲ ಇದೆ. ಸಾಕ್ಷಿ ಸದರಿ ಗೇಟ್ ಗೆ ಅಡ್ಡ ಇಟ್ಟಿದ್ದ ತಗಡು ಮತ್ತು ಕಲ್ಲುಗಳನ್ನು ನಗರಸಭೆಯವರು ತೆಗೆದುಹಾಕಿದ್ದಾರೆ ಎಂದು ನುಡಿಯುತ್ತಾರೆ. ಸದರಿ ರಸ್ತೆಯ ಮೂಲಕ ನಾನು ನಮ್ಮ ಮನೆಗೆ ಹೋಗಿ ಬಂದು ಮಾಡುತ್ತೇನೆ.

ವಾದಿಯ ಚಿಕ್ಕಪ್ಪ ನನ್ನ ವಿರುದ್ದ ಒಎಸ್ ನಂ. 5/2016 ರಂತ ದಾವೆ ದಾಖಲಿಸಿರುತ್ತಾರೆ ಎಂದೆರೆ ನಿಜ. ಸದರಿ ದಾವೆಯಲ್ಲಿ ನನ್ನ ವಿರುದ್ದ ತಾತ್ಕಲಿಕ ನಿರ್ಬಂದಕಾಜ್ಞೆ ಆಗಿದೆ ಎಂದೆರೆ ನಿಜ. ತದನಂತರ ವಾದಿ ಸದರಿ ಕಂಪೌಂಡ್ ಗೇಟ್ ಗೆ ಬೇಲಿ ಹಾಕಿರುತ್ತಾರೆ ಎಂದರೆ ನಿಜ. ಸದರಿ ಗೇಟ್ ಮೂಲಕ ವಾದಿ ಮತು ಅವರ ಚಿಕ್ಕಪ್ಪರನ್ನು ಹೊರತುಪಡಿಸಿ ಬೇರೆ ಯಾರಿಗೂ ಸಹ ಅಡ್ಡಾಡಲು ಆಸ್ಪದ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಈಗ ವಾದಿ ಬೇಲಿ ಹಾಕಿದ್ದರಿಂದ ಅಡ್ಡಾಡುವುದು ಬಂದಾಗಿದೆ ಎಂದು ನುಡಿಯುತ್ತಾರೆ. ನಾನು ವಾಸವಾಗಿರುವ ಮನೆಯಿಂದ 20 ಅಡಿ ಅಂತರದಲ್ಲಿ ನಮ್ಮ ಇನ್ನೊಂದು ಹಳೆ ಮನೆ ಇದೆ. ನಮ್ಮ ಮನೆಯನ್ನು ಬಿಟ್ಟು ಬೇರೆ ಯಾವ ಮನೆಗಳು ಸಹ ನಮ್ಮ ಮನೆಯ ಹತ್ತಿರ ಇಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯ ಹತ್ತಿರ 4 ಮನೆಗಳು ಇವೆ. ಸದರಿ 4 ಮನೆಗಳಿಗೆ ಮತ್ತು ನಮ್ಮ ಮನೆಗೆ ಬೇರೆ ರಸ್ತೆ ಇದೆ ಎಂದರೆ ಸಾಕ್ಷಿ ಎರಪೋರ್ಟ್ ಗಾಗಿ ಕಾಯಿದ್ದಿರಿಸಿದ ರಸ್ತೆ ಇದೆ ಎಂದು ನುಡಿಯುತ್ತಾರೆ. ಈಗ ನಾವು ಹಾಗೂ ಉಳಿದ ನಮ್ಮ ಮನೆಯ ಹತ್ತಿರ ಇರುವ 4 ಮನೆಯವರು ಸದರಿ ಎರಪೋರ್ಟ್ ಗಾಗಿ ಕಾಯ್ದಿರಿಸಿದ ರಸ್ತೆಯನ್ನು ಉಪಯೋಗಿಸುತ್ತಿದ್ದೇವೆ ಎಂದರೆ ನಿಜ. ವಾದಿಯ ಮನೆಯ ಹತ್ತಿರ ಇರುವ ಗೇಟ್ ನ ರಸ್ತೆ ವಾದಿ ಮತ್ತು ಅವರ ಚಿಕ್ಕಪ್ಪನ ಸ್ವಂತ ಉಪಯೋಗಕ್ಕಾಗಿ ಇರುವ ರಸ್ತೆ ಎಂದೆರೆ ಸರಿಯಲ್ಲ.

ನಿಪಿ–12 ಕ್ಕೆ ಲಗತ್ತು ಇರುವ ನಕ್ಷೆಯಲ್ಲಿ ರಸ್ತೆ ಕಂಡು ಬರುವುದಿಲ್ಲ ಎಂದರೆ ನಿಜ. ಸಾಕ್ಷಿ ತಮಗೆ ನಗರಸಭೆಯವರು ರಸ್ತೆ ಮಾಡಿಕೊಟ್ಟಿರುವುದಾಗಿ ನುಡಿಯುತ್ತಾರೆ. ಮೊದಲು ಇದ್ದ ರಸ್ತೆಯನ್ನು ನಮಗೆ ಉಪಯೊಗಕ್ಕೆ ನೀಡಿರುತ್ತಾರೆ. ನಗರಸಭೆಯವರು ನಮಗೆ ಯಾವುದೇ ರಸ್ತೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಗರಸಭೆಯವರು ದಾರಿ ಮಾಡಿಕೊಟ್ಟ ಬಗ್ಗೆ ಛಾಯ ಚಿತ್ರಗಳನ್ನು ಹಾಜರುಪಡಿಸಿರುತ್ತೇನೆ. ನಿಡಿ–10 ರ ಜೊತೆಗೆ ಲಗತು ಚಾಯ ಚಿತ್ರಗಳನ್ನು ನಾನೇ ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಯರಮರಸ್ ದಂಡ್ ಪ್ರದೇಶದಲ್ಲಿ ಸುಮಾರು 1500 ಜನ ವಾಸವಿದ್ದಾರೆ. ಅಲ್ಲಿ ಶಾಲೆ , ಸಮುದಾಯ ಭವನ ಹಾಗೂ ಸರಕಾರಿ ಕಟ್ಟಡಗಳು ಇವೆ. ನಮ್ಮ ಮನೆಯ ನಂಬರ 13–7–336 ಎಂದು ಇರುತ್ತದೆ. ವಾದಿಯರು ಕಟ್ಟಿಕೂಂಡ ಕಂಪೌಂಡ ಗೋಡೆ ಮತ್ತು ಮನೆ ವಾದಿಯ ಸಂಪೂರ್ಣ ಹಕ್ಕಿನ ಆಸ್ತಿಯಿಂದ ನಗರಸಭೆಯವರು ದೃಡಿಕರಿಸಿರುತ್ತಾರೆ ಎಂದರೆ ಸರಿಯಲ. ನಿಪಿ–15 ರಂತೆ ಜಿಲ್ಲಾದಿಕಾರಿ ರಾಯಚೂರು ಇವರು ಸದರಿ ಆಸ್ತಿಗೆ ವಾದಿಯೇ ಮಾಲಿಕರು ಹಿಂಬರಹ ನೀಡಿರುತ್ತಾರೆ ಎಂದರೆ ನಿಜ. ಸಾಕ್ಷಿ ಅದನ್ನು ಮರು ದಿನವೆ ರದ್ದುಪಡಿಸಿರುವುದಾಗಿ ನುಡಿಯುತ್ತಾರೆ. ಸದರಿ ರದ್ದುಪಡಿಸಿದ ಆದೇಶವನ್ನು ಹಾಜರುಪಡಿಸಿರುತ್ತೇನೆ. ರದ್ದುಪಡಿಸಿದ ಆದೇಶದ ವಿರುದ್ದ ಮಾನ್ಯ ಉಚ್ಚ ನ್ಯಾಯಾಲಯದವರು ತಡೆಯಾಜ್ಞೆ ನೀಡಿರುತ್ತಾರೆ ಎಂದರೆ ನಿಜ. ನಾನು ವಾದಿ ಮತ್ತು ಅವರ ಚಿಕ್ಕಪ್ಪನಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ.

ನಾನು ಮತು ನಮ್ಮ ವ್ಡಾರ್ಡ್ ನ ನಗರಸಬೆಯ ಸದಸ್ಯರು ಸೇರಿ ವಾದಿಯ ಕಂಪೌಂಡ್ ಗೋಡೆಯನ್ನು ಅಕ್ರಮವಾಗಿ ತೆರವು ಗೊಳಿಸಿರುತ್ತೇವೆ ಎಂದರೆ ಸರಿಯಲ್ಲ. ದಾವ ಆಸ್ತಿ ವಾದಿಯ ಸ್ವಂತ ಆಸ್ತಿಯಾಗಿದ್ದು ಅದರ ಮೇಲೆ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಾದಿಯರ ಉಪಯೋಗಕ್ಕೆ ಇರುವ ರಸ್ತೆಯ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ವಕೀಲರು ಸಮಯ ಕೇಳಿದ್ದರಿಂದ ಮುಂದೂಡಲಾಯಿತು.**

ಓದಿ ಹೇಳಿ ಸಹಿಪಡೆಯಲಾಗಿದೆ
**ಸಹಿ/–**
2ನೇ ಹೆಚ್ಚುವರಿ ಹಿರಿಯ ಮತ್ತು ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ರಾಯಚೂರು.